

ಗಿಡಮೂಲಿಕೆ

# ಮಧುಮೇಹಕ್ಕೆ ಕೆಂಪು ಹೊನ್ನೆ

ಕೆಂಪು ಹೊನ್ನೆ ಗಿಡವನ್ನು ಮನೆಯ ಅಂಗಳದಲ್ಲಿ ತುಳಸಿಗಿಡದಂತೆ ನೆಟ್ಟು ಬೆಳೆಸಬಹುದು.

'ಹಿತ್ತಲಗಿಡ ಮದ್ದಲ್ಲ' ಎಂಬ ಗಾದೆ ಮಾತೊಂದಿದೆ. ಬಹುಶಃ ನಮ್ಮ ಅಸಡ್ಡೆಯನ್ನು ಗಮನಿಸಿಯೇ ಆ ಗಾದೆ ಹುಟ್ಟಿರಬಹುದೇನೋ? ಇಲ್ಲಿ ಪರಿಚಯಿಸಿರುವ ಗಿಡದ ಹೆಸರು 'ಕೆಂಪು ಹೊನ್ನೆ'. ಆಂಗ್ಲ ಭಾಷೆಯಲ್ಲಿ ಇದನ್ನು 'ಇನ್ಸುಲಿನ್ ಪ್ಲಾಂಟ್' ಎಂಬ ಹೆಸರಿನಲ್ಲಿ ಕರೆಯುತ್ತಾರೆ.

ಈ ಗಿಡ ನನಗೆ ಸಿಕ್ಕಿದ್ದು 2014ರಲ್ಲಿ, ಖಿನ್ನತೆಯ ಬಗ್ಗೆ ಸಲಹೆ ಮತ್ತು ಚಿಕಿತ್ಸೆ ನೀಡುವ ಡಾ. ಗುರುಪ್ರಸಾದ್ ಅವರ ಮೂಲಕ. 'ಇದು ಸಕ್ಕರೆ ಕಾಯಿಲೆಗೆ ಔಷಧಿಯಾಗುವ ಎಲೆಯ ಗಿಡ' ಎಂದು ಅದರ ಬಗ್ಗೆ ಮಾಹಿತಿ ಇರುವ ವಿಸಿಟಿಂಗ್ ಕಾರ್ಡ್ ಗಾತ್ರದ ಚೀಟಿಯನ್ನು ನೀಡಿದ್ದರು. ಹಳೆಯ ಪ್ಲಾಸ್ಟಿಕ್ ಬಕೇಟಿನಲ್ಲಿ ಒಂದಿಷ್ಟು ಗೆರಟೆಗಳನ್ನು ತುಂಬಿಸಿ, ಅದರ ಮೇಲೆ ಸ್ವಲ್ಪ ಕೆಂಪು ಮಣ್ಣು ಸುರುವಿ ಗಿಡ ನೆಟ್ಟು ದಿನವೂ ನೀರುಣಿಸಿದೆ. ಗಿಡ ಬೆಳೆಯಿತು. ಬೆಳೆದಂತೆ ಅದರ ಬುಡದಿಂದ ಬಾಳೆಯ ಕಂದುಗಳಂತೆ ಗಿಡಗಳು ಮೊಳೆತುಬಂದವು. ಸುಮಾರು ನಾಲ್ಕು ವರ್ಷದ ಅವಧಿಯಲ್ಲಿ 50ಕ್ಕಿಂತಲೂ ಹೆಚ್ಚಿನ ಗಿಡಗಳನ್ನು ಅದರಿಂದ ಬೇರ್ಪಡಿಸಿ ಪರಿಚಯಸ್ಥರಿಗೆ ಗಿಡದ ಬಗ್ಗೆ ವಿವರಿಸಿ ನೀಡಿದ್ದೇನೆ.



2018ರ ಮೇ ತಿಂಗಳಲ್ಲಿ ನನಗೆ ಸಕ್ಕರೆ ಕಾಯಿಲೆ ಕಾಣಿಸಿಕೊಂಡಿತ್ತು. ವೈದ್ಯರ ಬಳಿ ಹೋದಾಗ ರಕ್ತ ಪರೀಕ್ಷೆಗೆ ಚೀಟಿ ಬರೆದುಕೊಟ್ಟರು. ನಂತರ ಮಾತ್ರೆ ಸೂಚಿಸಿದರು. ಮಾತ್ರೆ ಬಳಸಿದ ಮೇಲೆ ತೀವ್ರವಾದ ಬಳಲಿಕೆ ನಿಂತರೂ, ತಿಂಗಳಿಗೊಂದು ಬಾರಿ ರಕ್ತ ಪರೀಕ್ಷೆ ಮಾಡಿಸಿದಾಗ, ಉಪಾಹಾರದ ನಂತರ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗಿ ಕಂಡುಬಂತು. ನಾನು ವೈದ್ಯರಿಗೆ ನನ್ನಲ್ಲಿ ಇರುವ ಗಿಡದ ಬಗ್ಗೆ ಹೇಳಿದೆ. 'ಉಪಯೋಗಿಸಿ ನೋಡಿ' ಎಂಬ ಸಲಹೆ ಸಿಕ್ಕಿತು. ದಿನಕ್ಕೆ ಎರಡು ಬಾರಿ ಎರಡು ಎಲೆಯಂತೆ ಬಳಸಿದಾಗ ರಕ್ತದಲ್ಲಿ ಸಕ್ಕರೆ ಅಂಶ ಅಗತ್ಯ ಪ್ರಮಾಣದಲ್ಲಿ ಇರುವುದು ಕಂಡುಬಂತು.

ಈ ಗಿಡವನ್ನು ಮನೆಯ ಅಂಗಳದಲ್ಲಿ ತುಳಸಿಗಿಡದಂತೆ ನೆಟ್ಟು ಬೆಳೆಸಬಹುದು. ಮಧುಮೇಹಕ್ಕೆ ಈಗಾಗಲೇ ತೆಗೆದುಕೊಳ್ಳುತ್ತಿರುವ ಔಷಧದ ಜೊತೆಗೆ ಈ ಗಿಡದ ಎಲೆಗಳನ್ನೂ ಬಳಸಿ ನೋಡಬಹುದು. ಮಾಹಿತಿಗೆ: 9886191206. ಸಮಯ: ಬೆಳಿಗ್ಗೆ 10ರಿಂದ 12ರವರೆಗೆ.

■ ದೇವಕಿಸುತ


